# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಕೇಂದ್ರ ಕಛೇರಿ : ಬೆಂಗಳೂರು

ಸಂ:ಬೆಂಮಸಾ/ಕೇಕ/ನೇಮಕ/ಶಿಶಿಕ್ಷು/3919/2012-13 ದಿನಾಂಕ:12/02/2013

**ಶಿಶಿಕ್ಷು ಜಾಹೀರಾತು ಸಂಖ್ಯೆ: 01/2013**

ಶಿಶಿಕ್ಷು ಕಾಯ್ದೆ 1961ರ ಪ್ರಕಾರ ಅಗಸ್ಟ್-2012ರ ಅಧಿವೇಶನಕ್ಕೆ ಈ ಕೆಳಕಂಡ ತಾಂತ್ರಿಕ ವೃತ್ತಿಗಳಲ್ಲಿ ಪೂರ್ಣಾವಧಿ ಶಿಶಿಕ್ಷು ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸ | ವೃತ್ತಿಯ ಹೆಸರು | ತರಬೇತಿ ಅವಧಿ | ಖಾಲಿ ಸ್ಥಾನಗಳ ಸಂಖ್ಯೆ |
|---|---|---|---|
| 1 | ಡೀಸೆಲ್ ಮೆಕ್ಯಾನಿಕ್ | 3ವರ್ಷ | 300 |
| 2 | ವೆಲ್ಡರ್ | 2ವರ್ಷ | 25 |
| 3 | ಶೀಟ್‌ಮೆಟಲ್ ವರ್ಕರ್ | 3ವರ್ಷ | 39 |
| 4 | ಆಟೋ ಎಲೆಕ್ಟ್ರಿಷಿಯನ್ | 2ವರ್ಷ | 14 |
| 5 | ಟರ್ನರ್ | 3ವರ್ಷ | 02 |
| 6 | ಫಿಟ್ಟರ್ | 3ವರ್ಷ | 04 |
| ಒಟ್ಟು | | | 384 |

I) **ವಯೋಮಿತಿ**: ದಿನಾಂಕ:28/02/2013 ರಂದು ಕನಿಷ್ಠ 16 ವರ್ಷ ತುಂಬಿರಬೇಕು ಹಾಗೂ ಗರಿಷ್ಠ ವಯೋಮಿತಿ 26 ವರ್ಷ ಮೀರಿರಬಾರದು.

II) **ವಿದ್ಯಾರ್ಹತೆ:** ಕ್ರ.ಸಂ 1 ರಿಂದ 6 ರವರೆಗಿನ ಶಿಶಿಕ್ಷು ತರಬೇತಿಗೆ ಎಸ್. ಎಸ್. ಎಲ್. ಸಿ ಪರೀಕ್ಷೆಯಲ್ಲಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿರಬೇಕು.

III) **ತರಬೇತಿ ಭತ್ಯೆ**: ಆಯ್ಕೆಗೊಂಡ ಶಿಶಿಕ್ಷು ಆರ್ಭ್ಯಥಿಗಳಿಗೆ ಈ ಕೆಳಕಂಡಂತೆ ಮಾಸಿಕ ತರಬೇತಿ ಭತ್ಯೆ ನೀಡಲಾಗುವುದು.

(ಅ) 1ನೇ ವರ್ಷ ರೂ. 1490/-

(ಆ) 2ನೇ ವರ್ಷ ರೂ. 1700/-

(ಇ) 3ನೇ ವರ್ಷ ರೂ. 1970/-

IV) **ಅರ್ಜಿ ಸಲ್ಲಿಸುವ ವಿಧಾನ;-**

ಶಿಶಿಕ್ಷು ತರಬೇತಿ ಪಡೆಯಲು ಇಚ್ಚಿಸುವ ಅಭ್ಯರ್ಥಿಗಳು ಅಭ್ಯರ್ಥಿಯ ಹೆಸರು, ವಿಳಾಸ, ಹುಟ್ಟಿದ ದಿನಾಂಕ, ವಿದ್ಯಾರ್ಹತೆ, ಜಾತಿ, ಅಪೇಕ್ಷಿತ ವೃತ್ತಿಯ ಮಾಹಿತಿಗಳನ್ನೊಳಗೊಂಡ ಹಾಗೂ ಅಂದವಾಗಿ ಬೆರಳಚ್ಚುಗೊಳಿಸಿದ ಅರ್ಜಿಯೊಂದಿಗೆ ಇತ್ತೀಚಿನ 1 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಮತ್ತು ಸಂಬಂಧಪಟ್ಟ ಎಲ್ಲಾ ಮೂಲ ದಾಖಲಾತಿಗಳಾದ ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರ, ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ, ಐ.ಟಿ.ಐ ತೇರ್ಗಡೆ ಹೊಂದಿದ್ದಲ್ಲಿ ಅದರ ಪ್ರಮಾಣ ಪತ್ರಗಳೊಂದಿಗೆ ದಿನಾಂಕ:28/02/2013 ರಂದು ಬೆಳಿಗ್ಗೆ **10.30** ಗಂಟೆಯಿಂದ **5** ಗಂಟೆಯೊಳಗಾಗಿ **ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ನೇಮಕಾತಿ ಶಾಖೆ, ಕೇಂದ್ರ ಕಛೇರಿ, 5ನೇ ಮಹಡಿ, ಶಾಂತಿನಗರ ಬಸ್ ನಿಲ್ದಾಣ, ಬೆಂಗಳೂರು-560027,** ಇಲ್ಲಿ ಖುದ್ದಾಗಿ ಮೂಲ ದಾಖಲಾತಿಗಳ ಪರಿಶೀಲನೆಗೆ ಹಾಜರಾಗತಕ್ಕದ್ದು ಹಾಗೂ ಮೂಲ ದಾಖಲಾತಿಗಳ ಒಂದು ಸೆಟ್ ಜೆರಾಕ್ಸ್ ಪ್ರತಿಗಳನ್ನು ಸಹ ತರುವುದು. ಅಪೂರ್ಣ ಅಥವಾ ವಿಳಂಬವಾಗಿ ಸಲ್ಲಿಸುವ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

**V) <u>ಸೂಚನೆಗಳು:–</u>**

1) ಆಭ್ಯರ್ಥಿಗಳು ಕೋರಿರುವ ವೃತ್ತಿಯಲ್ಲಿ ಐ.ಟಿ.ಐ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿದ್ದಲ್ಲಿ ಅಂತಹವರಿಗೆ ತರಬೇತಿ ಅವಧಿಯಲ್ಲಿ ಒಂದು ವರ್ಷ ರಿಯಾಯಿತಿಯನ್ನು ನೀಡಲಾಗುವುದು.
2) ಈಗಾಗಲೇ ಶಿಶಿಕ್ಷು ಕಾಯ್ದೆ 1961 ರನ್ವಯ ಶಿಶಿಕ್ಷು ತರಬೇತಿ ಪಡೆದಿರುವವರು ಪುನಃ ಅರ್ಜಿ ಸಲ್ಲಿಸಲು ಅರ್ಹರಲ್ಲ.
3) ಶಿಶಿಕ್ಷು ತರಬೇತಿ ಪಡೆಯುವ ಅಭ್ಯರ್ಥಿಗಳು ತಮ್ಮ ತರಬೇತಿ ಪೂರ್ಣಗೊಳಿಸಿದ ನಂತರ ಸಂಸ್ಥೆಯಲ್ಲಿ ಅವರಿಗೆ ಯಾವುದೇ ರೀತಿಯ ನೇಮಕಾತಿ ಮಾಡಿಕೊಳ್ಳುವ ಒಪ್ಪಂದಕ್ಕೆ ಒಳಪಟ್ಟಿರುವುದಿಲ್ಲ ಮತ್ತು ತರಬೇತಿ ಪಡೆಯಲು ಅರ್ಹತೆ ಪಡೆದವರು ಶಿಶಿಕ್ಷು ಕಾಯ್ದೆ 1961 ರ ನಿಯಮಗಳು, ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತಾರೆ.
4) ತಾಂತ್ರಿಕ ಶಿಶಿಕ್ಷು ತರಬೇತಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಉತ್ತಮ ದೇಹದಾರ್ಢ್ಯತೆ ಹೊಂದಿರಬೇಕು.
5) ಒಂದಕ್ಕಿಂತ ಹೆಚ್ಚಿನ ವೃತ್ತಿಗಳಿಗೆ ಅರ್ಜಿ ಸಲ್ಲಿಸಲು ಬಯಸುವ ಆಭ್ಯರ್ಥಿಗಳು ಪ್ರತಿಯೊಂದು ವೃತ್ತಿಗಳಿಗೂ ಪ್ರತ್ಯೇಕ ಅರ್ಜಿ ಸಲ್ಲಿಸಬೇಕು. ಆಯ್ಕೆಗೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

**–ಸಹಿ–**

ಪ್ರದಾನ ವ್ಯವಸ್ಥಾಪಕರು (ತಾಂತ್ರಿಕ)

# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
## ಕೇಂದ್ರ ಕಛೇರಿ :: ಬೆಂಗಳೂರು

**ಜಾಹೀರಾತು ಸಂಖ್ಯೆ: 01/2013**

**ಅಪೇಕ್ಷಿತ ವೃತ್ತಿ :** ___________________

1) ಅಭ್ಯರ್ಥಿಯ ಹೆಸರು :

2) ತಂದೆಯ ಹೆಸರು :

3) ಹುಟ್ಟಿದ ದಿನಾಂಕ :

4) ಲಿಂಗ :

5) ಜಾತಿ ಮತ್ತು ಗುಂಪು :

| SC | ST | G1 | 2A | 2B | 3A | 3B | GM |
|---|---|---|---|---|---|---|---|

6) ವಿದ್ಯಾರ್ಹತೆ :

7) ವಿಳಾಸ : _____________________________

_____________________________

_____________________________

_____________________________

ಮೊಬೈಲ್ ಸಂ:

8) ಅನುಭವ :

9) ಲಗತ್ತುಗಳು :

ದಿನಾಂಕ: – –2013 (ಅರ್ಜಿದಾರರ ಸಹಿ)

ಸ್ಥಳ :